ಸರ್ಕಾರ ಇಂತಹ ಪರವಾನಗಿಯನ್ನು ಕೊಟ್ಟಿರುವುದಿಲ್ಲ. ಆಯೋಗ ಪೂರ್ಣಾವಧಿಯ ಕೆಲಸ. ಆ ಸಂದರ್ಭದಲ್ಲಿ ತಮ್ಮ ಹಿಂದೆ ಇರತಕ್ಕಂಥ ಕೆಲವು ವ್ಯಾಜ್ಯಗಳ ಬಗ್ಗೆ ಸುಮಾರು ಐದಾರು ದಿವಸಗಳ ಕಾಲ ವಾದ ಮಂಡಿಸಿರುವ ಮಾಹಿತಿ ಗೊತ್ತಿದೆ, ಅಷ್ಟು ಮಾತ್ರ ನಮಗೆ ಆ ಮಾಹಿತಿಯ ಸತ್ಯಾಸತ್ಯತೆಗಳು ನಮಗೆ ಗೊತ್ತಿಲ್ಲ, ಮತ್ತು ತಾವು ಹೇಳಿದಂತೆ ಒಂದು ಕಾನೂನು ಇಲ್ಲದಿದ್ದರೆ ಕೂಡ the probity requires that they are not supposed to argue an to take up any other person.

6. ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವ

272 (1957) ಶ್ರೀ ಮೋಹನ್ ಪಿ.ಸಿ., ಎಂಎಲ್ಎ (ಚಿಕ್ಕಪೇಟೆ) :– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಬರಲಿರುವ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯಡಿ ಈಗಾಗಲೇ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು;

ಈ) ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಪ್ರದೇಶಗಳನ್ನು ಗುರುತಿಸಲಾಗಿದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರಲಿರುವ

ಬೇಸಿಗೆಯ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವ ಸಲುವಾಗಿ ತಾತ್ಕಾಲಿಕ ಮತ್ತು ದೀರ್ಘಕಾಲಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ.

ಆ) **ಈ ಯೋಜನೆಯ ಅಂದಾಜು ವೆಚ್ಚ**

ರೂ.ಲಕ್ಷಗಳಲ್ಲಿ

ಬ್ಯಾಟರಾಯನಪುರ ವಲಯ	–	ರೂ. 75.00
ರಾಜರಾಜೇಶ್ವರಿನಗರ ವಲಯ	–	ರೂ. 220.42
ದಾಸರಹಳ್ಳಿ ವಲಯ	–	ರೂ. 195.00
ಮಹದೇವಪುರ	–	ರೂ. 200.00
ಬೊಮ್ಮನಹಳ್ಳಿ	–	ರೂ. 150.00

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2007ರ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವ ಸಲುವಾಗಿ ತಾತ್ಕಾಲಿಕ ಮತ್ತು ದೀರ್ಘಕಾಲಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ತಾತ್ಕಾಲಿಕ ಕ್ರಿಯಾ ಯೋಜನೆಗಳೆಂದರೆ;

1. ಹೊಸದಾಗಿ ಕೊಳವೆ ಬಾವಿ ಕೊರೆಯುವುದು.

2. ಹಾಲಿ ಇರುವ ಕೊಳವೆ ಬಾವಿಗಳನ್ನು ಸ್ವಚ್ಛಗೊಳಿಸುವುದು.

3. ಹಾಲಿ ಕೊರೆದಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ಜೋಡಣೆ ಸಾಮಗ್ರಿಗಳನ್ನು ಅಳವಡಿಸಿ, ವಿದ್ಯುದೀಕರಣ ಮಾಡುವುದು.

4. ಹಾಲಿ ಇರುವ ಕೊಳವೆ ಬಾವಿಗಳಿಗೆ ಹೆಚ್ಚುವರಿಯಾಗಿ ಜಿ.ಐ. ಪೈಪ್ ಕೇಬಲ್ ವೈರ್ ಅಳವಡಿಸುವುದು.

5. ಹಾಲಿ ಇರುವ ಕೊಳವೆ ಬಾವಿಗಳ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಕೈ ಪಂಪ್‌ಗಳನ್ನು ಸುಸ್ಥಿತಿಯಲ್ಲಿಡುವುದು.

6. ಪೈಪ್ ಲೈನ್‌ಗಳ ವಿಸ್ತರಣೆ, ದುರಸ್ತಿ ಮತ್ತು ನಿರ್ವಹಣೆ.

7. ಹಾಳಾದ/ಶಿಥಿಲಗೊಂಡ ಪಂಪ್‌ಸೆಟ್ ಮತ್ತು ಇತರ ಜೋಡಣೆ ಸಾಮಗ್ರಿಗಳನ್ನು ಬದಲಿಸಿ, ಹೊಸದಾಗಿ ಅಳವಡಿಸುವುದು.

8. ನೀರಿನ ತೀವ್ರ ಅಭಾವವಿರುವ ಪ್ರದೇಶಗಳನ್ನು ಗುರುತಿಸಿ, ಟ್ಯಾಂಕರ್ ಮುಖಾಂತರ ಕುಡಿಯುವ ನೀರಿನ ಸರಬರಾಜು ಮಾಡುವುದು.

9. ಕೆಲವು ಭಾಗಗಳಿಗೆ ಬೆಂಗಳೂರು ಜಲಮಂಡಳಿವತಿಯಿಂದ ಸಗಟು ಜಲ ಪೂರೈಕೆ ಪಡೆಯಲಾಗುವುದು.

ಈ) ಕುಡಿಯುವ ನೀರಿನ ಸಮಸ್ಯೆ ತಲೆದೋರಬಹುದಾದ ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

(ಸದರಿ ಪ್ರಶ್ನೆಗೆ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗೃಹ ಸಚಿವರು ಉತ್ತರಿಸಿದರು).

ಶ್ರೀ ಪಿ.ಸಿ. ಮೋಹನ್ :- ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಒದಗಿಸಿದ್ದಾರೆ. ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು short term ಮತ್ತು long term plan ಅನ್ನು ಸಿದ್ಧಪಡಿಸಿದ್ದೇವೆಂದು ಹೇಳುತ್ತಾರೆ. ಆದರೆ ಅದು ಯಾವುದು ಇನ್ನೂ implement ಆಗಿಲ್ಲ, ಈಗಾಗಲೇ ಬೆಂಗಳೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಏನಾಗಿದೆ ಎಂದರೆ ಇವತ್ತು ಪ್ಲಾನ್ ಸಿದ್ಧಪಡಿಸಿ ಇಂಪ್ಲಿಮೆಂಟ್ ಮಾಡುವುದು ಯಾವಾಗ? ನಮಗೆ ಸಮಸ್ಯೆಯಿರುವುದೇ ಮಾರ್ಚ್, ಏಪ್ರಿಲ್, ಮೇನಲ್ಲಿ. ಇವರು ಮಳೆಗಾಲದಲ್ಲಿ ಮಾಡುತ್ತಾರೆಯೇ ಏನು ಎಂಬುದನ್ನು ನಾನು ಕೇಳಬಯಸುತ್ತೇನೆ. ಏಕೆಂದರೆ ಈಗ ಸಿದ್ಧಪಡಿಸಿರುವುದನ್ನು war footing basis ನಲ್ಲಿ ಈಗಲೇ ಅವರು ಇಂಪ್ಲಿಮೆಂಟ್ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಾ, ಮತ್ತು ಇನ್ನೊಂದು ಏನು ಹೇಳಿದ್ದಾರೆಂದರೆ ಇಂಪ್ಲಿಮೆಂಟ್ ಮಾಡುವುದರಲ್ಲಿ ಹೊಸದಾಗಿ ಕೊಳವೆಬಾವಿಗಳನ್ನು ನಿರ್ಮಿಸುತ್ತೇವೆಂದು ಹೇಳುತ್ತಾರೆ. ಈಗಾಗಲೇ existing ಇರುವಂಥ ಕೊಳವೆಬಾವಿಗಳಿಗೆ ಬಿಲ್ ಕೂಡ ಕಟ್ಟುತ್ತಿಲ್ಲ. BWSSB ಅವರನ್ನು

ಕೇಳಿದರೆ Corporation ನವರ ಮೇಲೆ ಹೇಳುತ್ತಾರೆ, Corporation ನವರನ್ನು ಕೇಳಿದರೆ BWSSB ಯವರ ಮೇಲೆ ಹೇಳುತ್ತಾರೆ. ಈ ರೀತಿ ಒಬ್ಬರ ಮೇಲೆ ಇನ್ನೊಬ್ಬರು ಹಾಕಿ ಬಹಳಷ್ಟು ತೊಂದರೆಗಳಾಗುತ್ತಿವೆ. ಇದನ್ನು ಯಾವಾಗ ಬಗೆಹರಿಸುತ್ತಾರೆಂದು ಕೂಡ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) :– ಬೃಹತ್ ಬೆಂಗಳೂರಿನ ಈ ಒಂದು ಸಂದರ್ಭ ಬಂದಾಗ ಪಾಲಿಕೆಯ ವ್ಯಾಪ್ತಿಗೆ ಇವೆಲ್ಲಾ ಸೇರ್ಪಡೆಗಳಾಗುತ್ತವೆ, ತಮಗೂ ಕೂಡ ಗೊತ್ತಿದೆ, ಬ್ಯಾಟರಾಯನಪುರ ವಲಯಕ್ಕೆ 75 ಲಕ್ಷ ರೂ. ರಾಜರಾಜೇಶ್ವರಿ ನಗರದ ವಲಯಕ್ಕೆ 220 ಲಕ್ಷ, ದಾಸರಹಳ್ಳಿ ವಲಯಕ್ಕೆ 195 ಲಕ್ಷ ರೂ. ಮಹದೇವಪುರ ವಲಯಕ್ಕೆ 200 ಲಕ್ಷ, ರೂ.ಬೊಮ್ಮನಹಳ್ಳಿ ವಲಯಕ್ಕೆ 150 ಲಕ್ಷ ರೂ.ಗಳನ್ನು ಕೊಡುವುದಲ್ಲದೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದರ ಜೊತೆಗೆ 5.00 ಕೋಟಿ ರೂ.ಗಳನ್ನು ಬರಗಾಲದ ಕಾಮಗಾರಿಯ ಕೆಳಗೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಿಕ್ಕೆ ಬಿಡುಗಡೆ ಮಾಡಿದ್ದೇವೆ. ಈಗಾಗಲೇ ನೀರಿನ ತೀವ್ರ ಅಭಾವವಿರುವಂಥದ್ದರ ಕಡೆಗೆ 50 ಟ್ಯಾಂಕರ್‌ಗಳ ಮೂಲಕ ಪ್ರತಿ ದಿವಸ ಒಂದೊಂದು ಟ್ಯಾಂಕರ್ ಐದಾರು ಬಾರಿ ಆ ನೀರನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಿದೆ, ಪ್ರತಿಯೊಂದು ಟ್ಯಾಂಕರ್ ಕೂಡ 6,000 ಲೀಟರ್ ಕೆಪಾಸಿಟಿ ಇರತಕ್ಕಂಥದ್ದು ಇದೆ, ಕನಿಷ್ಠ ದಿನವೊಂದಕ್ಕೆ 100 ಲೀಟರ್‌ನಷ್ಟು FVCD ಪ್ರಕಾರ ಕೊಡಬೇಕೆಂಬ ಗುರಿ 055 ಆಗಿದ್ದರೂ ಕೂಡ ಅದರ ಪ್ರಯತ್ನ ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ಈಗ ಕುಡಿಯುವ ನೀರಿನ ದುಸ್ಥಿತಿ ಇದೆ, ಖಂಡಿತವಾಗಿ ಸರ್ಕಾರ ತೀವ್ರವಾದ ಗಮನ ಕೊಟ್ಟಿದೆ, ತಿಪ್ಪಗೊಂಡನಹಳ್ಳಿ ಜಲಾಶಯ ಅದನ್ನು ಪಂಪ್ ಮಾಡತಕ್ಕಂಥದ್ದು ಕಡಿಮೆಯಾಗಿ ನಿಲ್ಲಿಸಿದ್ದೇವೆ. ಮತ್ತೆ ಇನ್ನೊಂದು, ಮಾನ್ಯ ಮಾಧುಸ್ವಾಮಿಗಳು ಸಹ ಪ್ರಸ್ತಾಪ ಮಾಡಿದರು, ಕಾವೇರಿ ಜಲವಿವಾದದ ಸಂದರ್ಭದಲ್ಲಿ transient valley zones ವಿಷಯದಲ್ಲಿ ಮಾತನಾಡಿ ಬೆಂಗಳೂರು ನಗರ 1/3ನೇ ಅಂಶದ ಭಾಗ ಈ ಕಣಿವೆಯಲ್ಲಿ ಬರುತ್ತಿದೆ, ಕೃಷ್ಣಾ ಕಣಿವೆಯನ್ನು ಬಿಟ್ಟು ಉಳಿದ ಕಣಿವೆಗೆ ಬರುತ್ತದೆ, ಕಾವೇರಿ ಕಣಿವೆಗೆ ಬರುವುದಿಲ್ಲ, ಆದ್ದರಿಂದ ನೀವು ಅಷ್ಟು ನೀರು ಕೊಡುವ ಅವಶ್ಯಕತೆ ಇಲ್ಲವೆಂದು ತಿರಸ್ಕಾರ ಮಾಡಿದ್ದು

ಕೂಡಿದೆ, ಈ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರ ಪೂರ್ವ ಸಿದ್ಧತೆಯನ್ನು ಎಲ್ಲಾ ಮಾಡಿಕೊಂಡಿದೆ, ಖಂಡಿತವಾಗಿಯೂ ತಾವು ವ್ಯಕ್ತ ಮಾಡಿರುವ ಆತಂಕದ ಕಡೆಗೆ ಸರ್ಕಾರ ಸಂಪೂರ್ಣ ಗಮನ ಕೊಟ್ಟು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಸಿ. ಮೋಹನ್ :– ನನಗೆ ಬಂದಿರುವ ಮಾಹಿತಿ ಪ್ರಕಾರ ತೆರೆಕಾಡನಹಳ್ಳಿ ಪಂಪಿಂಗ್ ಸ್ಟೇಷನ್‌ಗೆ ಪವರ್ ಸಪ್ಲೈ ಪ್ರಾಬ್ಲಮ್ ಇದೆಯೆಂದು ಹೇಳುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವಾಗ ಪರಿಹಾರ ಮಾಡುತ್ತೀರಿ? uninterrupted power ಕೊಡಲಿಕ್ಕಾಗುತ್ತದೆಯೇ ಎಂದು ಕೇಳಲಿಚ್ಛಿಸುತ್ತೇನೆ. ಇನ್ನೊಂದು ಪ್ರಶ್ನೆ, ಈಗ ಬ್ಯಾಟರಾಯನಪುರಕ್ಕೆ 75.00 ಲಕ್ಷ ಹಣವನ್ನು ಕೊಟ್ಟಿದ್ದೀರಿ, ಇದು short term ಇರುವುದನ್ನು ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ? ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಈಗಾಗಲೇ ಕ್ರಿಯಾ ಯೋಜನೆಯನ್ನು ತಯಾರು ಮಾಡಿರುವುದರಲ್ಲಿ ದೀರ್ಘಾವಧಿಯಾಗಿರತಕ್ಕಂಥ ಕಾರ್ಯಕ್ರಮ, ತತ್‌ಕ್ಷಣದಲ್ಲಿ ಮಾಡಬೇಕಾದಂಥ ಕಾರ್ಯಕ್ರಮ ಎರಡೂ ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ energisation ಆಗದೇ ಇರುವಂಥ ಪ್ರದೇಶಗಳಿಗೆ ಹಣ ಕಟ್ಟಿದಿದ್ದರೆ ಹಣ ಪಡೆದು ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ಮಾಡಿದ್ದೇವೆ. ತಾವು ಹೇಳಿದಂಥ ಗ್ರಾಮದ ವಿಚಾರವನ್ನು ಅಧಿಕಾರಿಗಳು ಈಗಾಗಲೇ ನಿರ್ಧಾರ ಪಡಿಸಿದ್ದಾರೆ, ಖಂಡಿತವಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಹಣವನ್ನು ಸಹ ಬಿಡುಗಡೆ ಮಾಡುತ್ತೇವೆ.

ಉಪಾಧ್ಯಕ್ಷರು :– ಶ್ರೀಮತಿ ಟಿ. ಭಾಗೀರಥಿಯವರ ಪ್ರಶ್ನೆ 273ಕ್ಕೆ ಮಂತ್ರಿಗಳು 15 ದಿವಸಗಳ ಸಮಯಾವಕಾಶ ಕೇಳಿದ್ದಾರೆ.

ಶ್ರೀಮತಿ ಟಿ. ಭಾಗೀರಥಿ :– ಸನ್ಮಾನ್ಯ ಉಪಾಧ್ಯಕ್ಷರೇ, ನಾನೀಗ ಸರ್ಕಾರ ಇದೆಯೇ, ಇಲ್ಲವೇ ಎಂದು ಕೇಳಬೇಕಾಗುತ್ತದೆ, ಗೊತ್ತಾಗಬೇಕು. ಏಕೆಂದರೆ ಈ ಯೋಜನೆ ಬಗ್ಗೆ ಸುಮಾರು ಎರಡೂವರೆ ವರ್ಷಗಳಿಂದ...

ಶ್ರೀ ಧರ್ಮಸಿಂಗ್ :– ಸಚಿವರು ಕಾಲಾವಕಾಶ ಕೇಳಿದ್ದಾರೆ, ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿದ್ದಾರೆ, ಅವರು ಉತ್ತರಿಸಲಿ. 15 ದಿವಸಗಳ ಕಾಲಾವಕಾಶ ಕೇಳಿದ್ದಾರಂತೆ. ಅದು ಅಷ್ಟು ಸರಿಯಲ್ಲ, ತಾವೇ ಉತ್ತರ ಕೊಡಬಹುದು.

ಶ್ರೀ ಎಂ.ಪಿ. ಪ್ರಕಾಶ್(ಗೃಹ ಸಚಿವರು) :– ಲೋಕೋಪಯೋಗಿ ಇಲಾಖೆಯವರಿಗೆ ಇಲ್ಲಿ ಬಹಳ ವಿವರಗಳನ್ನು ಕೇಳಿರುವ ಕಾರಣಕ್ಕೆ ಉತ್ತರ ಕೊಡಲಾಗುತ್ತಿಲ್ಲ. ಉದಾಹರಣೆಗೆ (ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಬಳ್ಳಾರಿ ಜಿಲ್ಲಾ ವಿಶೇಷ ಪ್ಯಾಕೇಜಿನಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಯಾವುವು? (ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ; ಇದರಲ್ಲಿ ಮುಗಿದಿರುವ ಹಾಗೂ ಬಾಕಿಯಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ಇ) ಈ ಕಾಮಗಾರಿಗಳಿಗಾಗಿ ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು ? ಎಂದು ಕೇಳಿದ್ದೀರಿ, ಇದಕ್ಕೆ ವಿವರಗಳನ್ನು ಕೊಡಬೇಕು. ತಮಗೂ ಗೊತ್ತಿದ್ದು ಅವರಿಗೂ ಕೂಡ ಗೊತ್ತಿದೆ, ನಮ್ಮಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿದ್ದು ಹಾಗೇ ಉಳಿದಿದೆ. ಜಿಲ್ಲಾ ಪಂಚಾಯತ್‌ನಲ್ಲಿ ಕಳೆದ ಬಾರಿ ಧರಂಸಿಂಗ್‌ರವರು ಮುಖ್ಯಮಂತ್ರಿಗಳಿದ್ದಾಗ 10.50 ಕೋಟಿ ರೂ. ಬಿಡುಗಡೆಯಾಗಿತ್ತು. ಲೋಕೋಪಯೋಗಿ ಇಲಾಖೆಯಿಂದ ಇವತ್ತಿನವರೆಗೂ ನಮ್ಮ ಡಿವಿಷನ್‌ಗೆ ಬಿಡುಗಡೆಯಾಗಬೇಕಾದದ್ದು ಮೂರುವರೆ ಕೋಟಿ ರೂ.ಗಳಿವೆ ಬಳ್ಳಾರಿ ಡಿವಿಷನ್‌ಗೆ ಏಳೂವರೆ ಕೋಟಿ ಕೊಡಬೇಕಾಗಿದೆ, ಆ ವಿವರಗಳು ಕರಾರುವಕ್ಕಾಗಿ ಇರಬೇಕೆನ್ನುವ ದೃಷ್ಟಿಯಿಂದ ಟೈಮ್ ಕೇಳಿದ್ದಾರೆ, ಅವತ್ತು ಅಧಿವೇಶನ ಇರುವುದಿಲ್ಲ, ಪತ್ರ ಬರೆದು ಕಳುಹಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :– ಈ ಪ್ರಶ್ನೆ ಏನಿದೆ, ಮುದ್ದತ್ ಕೇಳುವಂಥಾದ್ದೇನಿದೆ, ದಯವಿಟ್ಟು ಹೇಳಿ, ಸರಳ ಪ್ರಶ್ನೆಯಿದೆ ಇದು. (ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಬಳ್ಳಾರಿ ಜಿಲ್ಲಾ ವಿಶೇಷ ಪ್ಯಾಕೇಜಿನಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಯಾವುವು? ನಿಮ್ಮ ಕೈಯಲ್ಲಿ ಅಂಕಿ ಇವೆ, (ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ; ಇದರಲ್ಲಿ ಮುಗಿದಿರುವ ಹಾಗೂ ಬಾಕಿಯಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ಇ) ಈ ಕಾಮಗಾರಿಗಳಿಗಾಗಿ ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು ? ಏನು ಭಾರಿ ಮಾಹಿತಿ ಇದೆ, ಇಡೀ ರಾಜ್ಯದ್ದು

ಕೇಳಿದ್ದಾರೆಯೇ ಅವರು, ಒಂದು ತಾಲ್ಲೂಕಿನದು ಕೇಳಿದ್ದಾರೆ. ದಯವಿಟ್ಟು ಹೇಳಿ ಇದರಲ್ಲಿ ಮುದ್ದತ್ ಕೇಳುವುದೇನಿದೆ, ನಿಮ್ಮ ಅಧಿಕಾರಿಗಳು ಇದಕ್ಕೆ 15 ದಿವಸಗಳು ಬೇಕು ಎಂದು ಕೇಳುತ್ತಾರೆ. ಇದು ಸರಿಯೇ?

ಶ್ರೀ ಡಿ.ಆರ್. ಪಾಟೀಲ್ :– ಈಗ ನಿಮ್ಮ ಹತ್ತಿರ ಮಾಹಿತಿ ಇರಲಿಕ್ಕಿಲ್ಲ, 2ನೇ ತಾರೀಖು ಉತ್ತರ ಕೊಡುತ್ತೇವೆಂದು ಹೇಳಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್ :– ಹೇಳಿ, ಈ ಪ್ರಶ್ನೆ ಉಳಿಯಲಿ,

ಶ್ರೀಮತಿ ಟಿ. ಭಾಗೀರಥಿ :– ಇದಕ್ಕೆ ನಾನು ಒಪ್ಪುವುದಿಲ್ಲ, ಎರಡೂವರೆ ವರ್ಷಗಳಿಂದ ಈ ವರದಿಗಳು ಬಂದು ಸರ್ಕಾರದ ಮಟ್ಟದಲ್ಲಿ ಕೊಳೆಯುತ್ತಿದೆ, ಹಾಕಿರತಕ್ಕಂಥ ಕಟ್ಟಡಗಳೆಲ್ಲಾ ಬಿದ್ದು ಹೋಗಿ ರಸ್ತೆಗಳೆಲ್ಲಾ ಹಾಳಾಗಿ ಎಲ್ಲಾ ಮುಗಿದು ಹೋಗಿ ಜಿಲ್ಲಾ ಪಂಚಾಯತಿ, ಶಾಸಕರು ಪ್ರತಿಯೊಬ್ಬರು ಸರ್ಕಾರದ ಗಮನಕ್ಕೆ ತಂದರೂ ಕೂಡ ಈ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ 15 ದಿವಸ ಬೇಕೆಂದು ಕೇಳಿದರೆ ಇದಕ್ಕೆ ನಾನೇನು ಉತ್ತರ ಹೇಳಲಿ, ತಮಗೂ ಗೊತ್ತಿದೆ, ತಾವು ನಮ್ಮ ಜಿಲ್ಲೆಯ ಪಕ್ಕದವರು. ಇದು ಬಹಳ ವಿಷಾದನೀಯ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಹರಪನಹಳ್ಳಿ) :– ಮಾನ್ಯ ಉಪಾಧ್ಯಕ್ಷರೇ, ಈ ವಿಚಾರ ಕೇವಲ ಆ ಕೂಡ್ಲಿಗಿ ತಾಲ್ಲೂಕಿಗೆ ಸಂಬಂಧಪಟ್ಟಿದ್ದಲ್ಲ, ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಿರುವ ವಿಚಾರ, ಇದರ ಬಗ್ಗೆ ಗೃಹ ಮಂತ್ರಿಗಳಿಗೆ ಸಂಪೂರ್ಣವಾದ ಮಾಹಿತಿ ಇದೆ, ಈಗಾಗಲೇ ನಮ್ಮಲ್ಲಿ ಶಾಲಾ ಕೊಠಡಿಗಳು, ಆರೋಗ್ಯ ಕಟ್ಟಡಗಳು ಮತ್ತು ರಸ್ತೆಗಳು ಇವೆಲ್ಲವೂ ಕೂಡ ಟೆಂಡರಾಗಿ ಕಾಮಗಾರಿ ಮುಗಿದು ಕೆಲವು ಅರ್ಧ ಆಗಿ ನಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಬೇರೆ ಯೋಜನೆಯೊಳಗೆ ಆ ರೂಮು ಪೂರ್ಣ ಮಾಡಲಿಕ್ಕೆ ಬರುವುದಿಲ್ಲ, ಆ ರಸ್ತೆಯನ್ನು ಬಾಕಿ ಹಣ ಪಾವತಿ ಮಾಡಲಿಕ್ಕೆ ಬರುವುದಿಲ್ಲ, ಟೆಂಡರ್‌ನಲ್ಲಿ ಕಾಮಗಾರಿ ಹಿಡಿದಿರತಕ್ಕಂಥ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದ್ದಾರೆ, ಇದು ಎಂ.ಪಿ.ಪ್ರಕಾಶ್‌ರವರಿಗೆ ಗೊತ್ತಿದೆ, ಅವರ ಗಮನದಲ್ಲಿಯೂ ಇದೆ, ನಮ್ಮಲ್ಲೇನಾದರು ಆ ಸ್ಪೆಷಲ್ ಡೆವಲಪ್‌ಮೆಂಟ್ ಪ್ಯಾಕೇಜ್ ಘೋಷಣೆ ಆಗದೇ ಹೋಗಿದ್ದರೆ ಬಳ್ಳಾರಿ

ಜಿಲ್ಲೆಯ ರಸ್ತೆಗಳು ನರಕ ಯಾತನೆಯನ್ನು ಅನುಭವಿಸುತ್ತಿದ್ದವು. ಈ ವ್ಯವಸ್ಥೆ ಶೋಚನೀಯ ಪರಿಸ್ಥಿತಿಗೆ ಹೋಗಿತ್ತು. ಹಿಂದಿನ ಸರ್ಕಾರದಲ್ಲಿ ಇದಕ್ಕೆ ಒಂದು ಕಾಯಕಲ್ಪ ಕೊಟ್ಟು ಆ ರಸ್ತೆ ಸುಧಾರಣೆ, ಶಾಲಾ ಕೊಠಡಿಗಳನ್ನು ಕಟ್ಟುವಂಥಾದ್ದು, ಆರೋಗ್ಯ ಕೇಂದ್ರಗಳನ್ನು ಕಟ್ಟುವಂಥ ಒಂದು ಒಳ್ಳೆಯ ಕೆಲಸಕ್ಕಾಗಿ ಅದಕ್ಕೆ ಒಂದು ಸ್ಪೆಷಲ್ ಪ್ಯಾಕೇಜನ್ನು ಆ ಹಿಂದುಳಿದ ಪ್ರದೇಶಕ್ಕೆ ಕೊಡುವುದರ ಮೂಲಕ ಆ ಪ್ರದೇಶ ಅಭಿವೃದ್ಧಿಯಾಗಲಿ ಎಂದು ಕೊಡಲಾಗಿದೆ. ಒಂದು ಮತ್ತು ಎರಡನೇ ಕಂತಿನ ಹಣ ಬಿಡುಗಡೆ ಮಾಡಿ ಮೂರನೆ ಕಂತಿಗೆ ಇದನ್ನು ಅಡ್ಡ ಇಟ್ಟು ಸರ್ಕಾರ ಬದಲಿಯಾದ ತಕ್ಷಣ ಇವೆಲ್ಲವೂ ನಿಂತು ನಮ್ಮ ಪರಿಸ್ಥಿತಿ ಅಧೋಗತಿಯ ಶೋಚನೀಯ ಪರಿಸ್ಥಿತಿಯಾಗಿದೆ. ದಯಮಾಡಿ ಇದಕ್ಕೆ ಸನ್ಮಾನ್ಯ ಎಂ.ಪಿ.ಪ್ರಕಾಶ್‌ರವರು ದೊಡ್ಡ ಮನಸ್ಸು ಮಾಡಬೇಕು. ನಿಮ್ಮ ಕ್ಷೇತ್ರ ಕೂಡ ಈ ವ್ಯಾಪ್ತಿಗೆ ಸೇರಿದೆ, ನಾನು ದಾವಣಗೆರೆ ಜಿಲ್ಲೆಗೆ ಸೇರಿದ್ದರೂ ಕೂಡ ನನ್ನ ಕ್ಷೇತ್ರ ಕೂಡ ಈ ಒಂದು ಪ್ಯಾಕೇಜಿನಲ್ಲಿ ಸೇರಿದೆ, ದಯಮಾಡಿ ಆ ಹಣವನ್ನು ಜಿಲ್ಲಾ ಪಂಚಾಯತ್ ಇರಬಹುದು, ಲೋಕೋಪಯೋಗಿ, ಆರೋಗ್ಯ ಇಲಾಖೆ ಇರಬಹುದು. ಆ ವ್ಯಾಪ್ತಿಗೆ ಬರುವಂಥ ಎಲ್ಲಾ ಇಲಾಖೆಗಳ ಹಣವನ್ನು ಈಗೇನು ಕೆಲವು ಕಾಮಗಾರಿ ಮುಗಿದಿವೆ, ಕೆಲವು ಅರ್ಧ ಮುಗಿದಿವೆ ಅದನ್ನು ಪೂರ್ಣಗೊಳಿಸಲಿಕ್ಕೆ ತಾವು ದಯಮಾಡಿ ಬಿಡುಗಡೆ ಮಾಡಿಸಬೇಕು. ನಮ್ಮ ಎಸ್.ಎಸ್.ಪಾಟೀಲರು ಹೇಳಿದ ಹಾಗೆ 15 ದಿವಸಗಳ ಕಾಲಾವಕಾಶ ಖಂಡಿತವಾಗಿಯೂ ಅವರಿಗೆ ಬೇಕಾಗಿಲ್ಲ. ಇದನ್ನು ಬೇಕಾಗಿಯೇ ಈ ಅಸೆಂಬ್ಲಿ ಮುಂದೂಡಬೇಕೆಂಬ ಉದ್ದೇಶದಿಂದ ಹೀಗೆ ಮಾಡುತ್ತಿದ್ದೀರಿ ಎಂದು ನಮ್ಮ ಭಾವನೆ, ದಯಮಾಡಿ ಬಹಳ ಶೋಚನೀಯ ಪರಿಸ್ಥಿತಿ ಇದೆ, ಅದನ್ನು ತ್ವರಿತವಾಗಿ ನಮ್ಮ ಎಸ್.ಎಸ್.ಪಾಟೀಲ್ ಹೇಳಿದ ಹಾಗೆ ಮುಂದಿನ ವಾರದಲ್ಲಿ ಅಧಿವೇಶನ ಮುಗಿಯುವುದರೊಳಗೆ ಸ್ಪಷ್ಟ ಉತ್ತರವನ್ನು ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ತಾವು ಕೊಡಿಸಬೇಕು ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಉಪಾಧ್ಯಕ್ಷರೇ, 15 ಪ್ರಶ್ನೆಗಳಲ್ಲಿ 7 ಪ್ರಶ್ನೆಗಳು ಲೋಕೋಪಯೋಗಿ ಸಚಿವರದ್ದು ಇದೆ. ಇದೊಂದು ಗುರುತರವಾದ

ವಿಷಯ. ಅವರು ಏಕಿಲ್ಲ ಈ ಸಭೆಯಲ್ಲಿ, ಇವತ್ತಿನ ದಿವಸ ಯಾವ್ಯಾವ ಮಂತ್ರಿಗಳು ಉತ್ತರ ಹೇಳಬೇಕೆಂದು ಅವರಿಗೆ ಗೊತ್ತಿರಲಿಲ್ಲವೇ? ನಿಮ್ಮ ಆಫೀಸಿನಿಂದ ಅವರಿಗೇನು ಮಾಹಿತಿ ಕೊಟ್ಟಿಲ್ಲವೇ, ಇಲ್ಲವೇ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೇ? ಇದು ಸನ್ಮಾನ್ಯ ಪ್ರಕಾಶ್‌ರವರು ಹೇಳುವಂಥ ಉತ್ತರವಲ್ಲ. ಇಡೀ ಅಸೆಂಬ್ಲಿಯಲ್ಲಿ ಕುಳಿತಿರುವವರಿಗೆ PWD ಹಣ ಎಲ್ಲೆಲ್ಲಿ ಹೇಗೆ ಖರ್ಚು ಆಗುತ್ತಿದೆ ಎಂದು ಕೇಳಬೇಕೆಂದು ಆಸಕ್ತಿ ಇದೆ, ನಿಮ್ಮನ್ನು grill ಮಾಡಿಕೊಂಡು ಕುಳಿತುಕೊಂಡು ನಾವೇನು ಮಾಡುವುದು ಇಲ್ಲಿ. 7–8 ಪ್ರಶ್ನೆಗಳು ಒಬ್ಬ ಮಂತ್ರಿಯವರದಾಗದ್ದು ಆ ಮಂತ್ರಿಗಳು ಅಸೆಂಬ್ಲಿಯಲ್ಲಿಲ್ಲವೆಂದರೆ ಗತಿಯೇನು? No, no, ನೀವು ಬೇರೆ statement ಮಾಡಿ, ಬೇರೆ written questions ಅನ್ನು ನಾನು ಟೇಬಲ್ ಮಾಡುತ್ತೇನೆಂದು ಹೇಳಿ. ಎಲ್ಲಾ ಸರಿ, ಇಲಾಖೆ ಮಂತ್ರಿಗೆ ಉತ್ತರ ಹೇಳುವಷ್ಟು, ಇಲ್ಲಿಗೆ ಬರುವಷ್ಟು ಸೌಜನ್ಯವಿಲ್ಲವೆಂದರೆ ಏನು ಗತಿ ಸರ್ ? ಆಗದಿದ್ದಲ್ಲಿ ಮುಂದಕ್ಕೆ ಹಾಕಿ ಬಿಡಿ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ದಯವಿಟ್ಟು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು :– ಮಾಧುಸ್ವಾಮಿಯವರೇ, ರೇವಣ್ಣನವರು ಪತ್ರ ಬರೆದಿದ್ದಾರೆ. ಪರ್ಮಿಷನ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಲೋಕೋಪಯೋಗಿ ಸಚಿವರು ಪರ್ಮಿಷನ್ ತೆಗೆದುಕೊಂಡು ಅವರು ಪತ್ರವೊಂದನ್ನು ಬರೆದು ಅವರ ಪರವಾಗಿ....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು.)

ಶ್ರೀ ವಾಟಾಳ್ ನಾಗರಾಜ್ :– ಉಪಾಧ್ಯಕ್ಷರೆ, ಲೋಕೋಪಯೋಗಿ ಸಚಿವರಿಲ್ಲ, ಮುಖ್ಯಮಂತ್ರಿಗಳಿಲ್ಲ, ಏನಿದು, ಪ್ರಶ್ನೋತ್ತರದ ಗಾಂಭೀರ್ಯ ಹೊರಟು ಹೋಯಿತು., ಏನು ಪರಿಸ್ಥಿತಿ? ಈ ರೀತಿ ಸದನ ನಡೆಸುವುದು ಸಭೆಗೆ ಅಗೌರವವಿದು. ಇದೇನಿದು ಅರಳಿ ಮರದ ಕೆಳಗಿನ ಸಭೆಯೆಂದು ತಿಳಿದುಕೊಂಡಿರೇನು?

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಎಂ.ಪಿ. ಪ್ರಕಾಶ್ :– ತಾವು ಹೇಳುವಂಥಾದ್ದು ಆಯಾಯಾ ಇಲಾಖೆ ಮಂತ್ರಿಗಳು ಇರಬೇಕೆನ್ನತಕ್ಕಂಥಾದ್ದು ನಿಜವೇ. ಅದು ಅಪೇಕ್ಷಣೀಯ ಆದರೂ ಕೆಲವು ಅನಿವಾರ್ಯ ಪರಿಸ್ಥಿತಿಗಳು ಬರುತ್ತವೆ ಎನ್ನುವ ಕಾರಣಕ್ಕಾಗಿಯೇ ಅವರು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದುಕೊಂಡು ಬೇರೊಬ್ಬ ಸಚಿವರು ನನ್ನ ಪರವಾಗಿ ಉತ್ತರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ತಾವು ಈಗಾಗಲೇ ಸಜೆಸ್ಟ್ ಮಾಡಿದ್ದೀರಿ, ಮಾನ್ಯ ಎಸ್.ಎಸ್.ಪಾಟೀಲರು ಮತ್ತು ಮಾನ್ಯ ಡಿ.ಆರ್.ಪಾಟೀಲರು, ಮಾನ್ಯ ಇಬ್ಬರು ಸದಸ್ಯರು ಎತ್ತಿರತಕ್ಕಂತಹ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಅವರು ಎತ್ತಿರತಕ್ಕಂತಹ ವಿಷಯ ನಿಜ. ನಮಗೆ ಬೇಕಾದಷ್ಟು ಹಣ ಬರಬೇಕಾಗಿರುವಂತಹ ಪರಸ್ಥಿತಿ ಇದೆ. ಬಳ್ಳಾರಿ ಪ್ಯಾಕೇಜನ್ನು ನಿಲ್ಲಿಸಿದ್ದೇವೆಂದು ನಿರ್ಧಾರ ಮಾಡಿದ್ದು ಹಿಂದಿನ ಸರ್ಕಾರದಲ್ಲಿ. ಈ ಸರ್ಕಾರ ಆ ನಿರ್ಧಾರ ಮಾಡಿಲ್ಲ. ಆದರೆ ಆ ಕಾಲದಲ್ಲಿಯೂ ಕೂಡ ಹಣವನ್ನು ಕೊಟ್ಟಿದ್ದೇವೆ. ಈ ಕಾಲದಲ್ಲಿಯೂ ಸಹ ಹಣ ಕೊಡಬೇಕಾಗಿದ್ದು ಇದೆ. ಖಂಡಿತವಾಗಿಯೋ ತಾವು ಹೇಳಿದಂತೆ ಅಧಿವೇಶನ ಮುಗಿಯುವುದರೊಳಗೆ 2ನೇ ತಾರೀಖು ಅಥವಾ 3ನೇ ತಾರೀಖು, ಇದರ ವಿಚಾರದಲ್ಲಿ ನಾವು ಉತ್ತರವನ್ನು ಕೊಡುತ್ತೇವೆ.

ಉಪಾಧ್ಯಕ್ಷರು :– ಅವರು permission ಅನ್ನು ತೆಗೆದುಕೊಂಡಿದ್ದಾರೆ. ಈಗ ಮಾನ್ಯ ಬಾಲರಾಜ್ ತಾವು ಪ್ರಶ್ನೆ ಕೇಳಿ.

ಶ್ರೀಮತಿ ಭಾಗೀರಥಿ ಮರಳಸಿದ್ದನಗೌಡ :– ನಾನು ತಮ್ಮ ಗಮನಕ್ಕೆ ತಂದಿದ್ದು ಮಾನ್ಯ ಮಂತ್ರಿಗಳು ಇಲ್ಲ ಅಂತ ಅಲ್ಲ. ಏತಕ್ಕೆ ಈ ಪ್ರಶ್ನೆಗೆ ಉತ್ತರ ಕೊಡುತ್ತಿಲ್ಲವೆಂದು.

ಶ್ರೀ ವಾಟಾಳ್ ನಾಗರಾಜ್ :– ರಾತ್ರಿ 12 ಗಂಟೆಯವರೆಗೂ ಚರ್ಚೆ ಮಾಡಿದರೆ ಹೇಗೆ?

ಉಪಾಧ್ಯಕ್ಷರು :– B.A.C. ಯಲ್ಲಿ ಚರ್ಚೆಯಾಗಿ ತೀರ್ಮಾನ ಮಾಡಿರುವುದು. ನೀವು ಏನು ಅಲ್ಲಿ ಮಾತನಾಡಿದ್ದೀರಿ ಅದರಂತೆಯೇ ಇಲ್ಲಿ ಅಜೆಂಡಾದಲ್ಲಿ ಬಂದಿರುವುದು. ನಿಮ್ಮ ಪ್ರಕಾರವೇ ಬಂದಿರುವುದು. 5ನೇ ತಾರೀಖಿನವರೆಗೂ ಈ ಸದನ ನಡೆಯುತ್ತದೆ. ನಿಮಗೆ ಉತ್ತರವನ್ನು ಅವರು ನಾಳೆ ಅಥವಾ ನಾಳಿದ್ದರಲ್ಲಿ ಬಂದು ಕೊಡುತ್ತಾರೆ.

ಶ್ರೀಮತಿ ಟಿ. ಭಾಗೀರಥಿ :– ನಾನು ಹೇಳುತ್ತಿರುವುದು ನಾನು ಭರವಸೆಗಳ ಸಮಿತಿ ಸದಸ್ಯೆಯಾಗಿ ಯಾವ ಯಾವ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡುತ್ತಾರೋ ಆ ಭರವಸೆಗಳು ಅಲ್ಲಿ ಬಂದು ಉತ್ತರ ಸರ್ಕಾರ ಕೊಡುತ್ತದೆ. ಎಷ್ಟೆಷ್ಟು ವರ್ಷಗಳಿಂದ ಉತ್ತರ ಬಂದಿದೆಯೆಂದು ನೋಡಿದ್ದೇನೆ. ಮುಂದೆ ಒಂದು ದಿನ ಉತ್ತರ ಕೊಡುವಂಥ ಕಾಲದಲ್ಲಿ ಇದೇ ರೀತಿ ಉತ್ತರ ಕೊಡಬಾರದು. ಏನಾದರೂ ಒಂದು ದಿಕ್ಕು ಕಾಣಿಸಬೇಕು.

ಶ್ರೀ ಎನ್. ಧರಂಸಿಂಗ್ :– ಮಾನ್ಯ ಪ್ರಕಾಶ್‌ರವರು ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು. ಅವರು ಪ್ರತಿ ತಿಂಗಳೂ review meeting ಮಾಡುತ್ತಾರೆ. ತಾವು review ಮಾಡತಕ್ಕಂಥ ಸಮಯದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಕೆಲಸ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳು ಬಂದ ತಕ್ಷಣ ಮಾನ್ಯ ಸದಸ್ಯರ ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಎಂ.ಪಿ. ಪ್ರಕಾಶ್ :– ಇದು ಮಾನ್ಯ ಸದಸ್ಯರೊಬ್ಬರ ಪ್ರಶ್ನೆಯೇ ಅಲ್ಲ. ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಸಕರ ಪ್ರಶ್ನೆಯಿದೆ.

ಉಪಾಧ್ಯಕ್ಷರು :– ಬಳ್ಳಾರಿ ಜಿಲ್ಲೆ ಒಂದೇ ಅಲ್ಲ, ಚಿತ್ರದುರ್ಗ ಜಿಲ್ಲೆಯೂ ಸೇರಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೇ, 2ನೇ ತಾರೀಖು ಅಥವಾ 3ನೇ ತಾರೀಖು ಉತ್ತರ ಕೊಡಿಸುವುದರ ಜೊತೆಗೆ ಹಣ ಬಿಡುಗಡೆ ಮಾಡುವುದಕ್ಕೂ ನಾನು ಪ್ರಯತ್ನ ಮಾಡುತ್ತೇನೆ.

ಮಕ್ಕಳು ಕಾಣೆಯಾಗುತ್ತಿರುವುದು

277 (1781) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) :– ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?